ಇವುಗಳಲ್ಲಿ ಮುಖ್ಯವಾದುವು 1) ಎಂಆರ್-1 ಮತ್ತುಪಿಆರ್-202 ರಾಗಿ ತಳಿಗಳು 2) ಡಿ.ಹೆಚ್-8 ಶೇಂಗಾ ತಳಿ 3) ಟಿಎಎಕ್ಸ- ತಲಸಂದ ತಳಿ ಮುಂತಾದವುಗಳು. ಹಾಗೆಯೇ ಪ್ರತಿ ಪ್ರಮಾಣ ರಾಸಾಯನಿಕ ಗೊಬ್ಬರಕ್ಕೆ ಹೆಚ್ಚು ಫಲಿತಾಂಶವನ್ನು ಕೊಡಬಲ್ಲ ಬೆಳೆ ತಳಿಗಳನ್ನು ಎಲ್ಲಾ ಬೆಳೆಗಳಲ್ಲಿಯೂ ಅಬಿವೃದ್ದಿಪಡಿಸಲಾಗುತ್ತಿದೆ. ಇಂತಹ ಕಡಿಮೆ ಪ್ರಮಾಣದ ಸಾಮಾಗ್ರಿಗಳನ್ನು ಬಳಸುವ ತಂತ್ರ ಜ್ಞಾನಗಳು ರಾಸಾಯನಿಕಗಳ ಒಟ್ಟು ಬಳಕೆ ಆಧಾರದ ಮೇಲೆ ಹೆಚ್ಚು ಇಳುವರಿಯನ್ನು ಪಡೆಯಲು ಸಾಧ್ಯವಾಗಿದೆ. ಆದರೆ ರಾಸಾಯನಿಕಗಳ ಬಳಕೆಯೇ ಇಲ್ಲದೇ ಕೃಷಿ ಉತ್ಪಾದನೆಯನ್ನು ಪಡೆಯುವ ದಿಶೆಯಲ್ಲಿ ಯಾವ ಸಂಶೋಧನೆಯು ನಡೆಯುತ್ತಿಲ್ಲ.

ಆ) ಹೌದು, ಈ ದಿಶೆಯಲ್ಲಿ ಕಾರ್ಯಕ್ರಮಗಳು ನಡೆಯುತ್ತಿವೆ.

ಚಿಕ್ಕ ರೈತರಿಗೆ ಸಬ್ಸಿಡಿ ರಸಗೊಬ್ಬರ ವಿತರಣೆ.

488 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

ಅ) *1991ರಲ್ಲಿ ಚಿಕ್ಕ ರೈತರಿಗೆ ಸಬ್ಸಿಡಿ ಧಾರಣೆಯಲ್ಲಿ ರಸಗೊಬ್ಬರ ಕೊಡುತ್ತೇವೆಂದು ಹೇಳಿದ್ದು ಸರ್ಕಾರದ ಗಮನದಲ್ಲಿದೆಯೇ?*

ಆ) *ಹಾಗಿದ್ದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಸಬ್ಸಿಡಿ ಗೊಬ್ಬರದ ವಿತರಣೆ ಮಾಡಿದ ವಿವರ ಕೊಡಲಾಗುವುದೇ?*

ಇ) *1990-91 ಹಾಗೂ 1991-92ನೇ ಸಾಲಿನಲ್ಲಿ ರಸಗೊಬ್ಬರ ಸಬ್ಸಿಡಿ ಹಣ ವಿತರಣೆ ಹೇಗಾಯಿತೆಂಬುದನ್ನು ತಿಳಿಸಲಾಗುವುದೇ?*

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಗಮನದಲ್ಲಿದೆ, ಆದರೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಲಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) 1990-91ನೇ ಸಾಲಿಗೆ ಸಬ್ಸಿಡಿ ಯೋಜನೆ ಜಾರಿಯಲ್ಲಿರಲಿಲ್ಲ. 1991-92ನೇ ಸಾಲಿನಲ್ಲಿ ಜಾರಿಗೊಳಿಸಲಾಗಲಿಲ್ಲ.

ಭೂಮಿಯ ವರ್ಗೀಕರಣ ಆಧಾರದ ಮೇಲೆ ನೊಂದಣಿ ಶುಲ್ಕ.

489 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) *ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಜಮಿನಿನ ಕಿಮ್ಮತ್ತಿನ ಆಧಾರದ ಮೇಲೆ ನೋಂದಣಿ ಶುಲ್ಕ ಆಕರಿಸುವ ಕಾರಣ ಭ್ರಷ್ಟಾಚಾರ ಹೆಚ್ಚಲಿಕ್ಕೆ ಕಾರಣವೆಂಬುದು ಸರ್ಕಾರಕ್ಕೆ ತಿಳಿದಿದೆಯೇ?*

ಆ) *ಜಮೀನು ಧಾರಣೆ ನಿರ್ಧಾರ ಮಾಡಲಿಕ್ಕೆ ಸರ್ಕಾರದ ಆಳತೆಗೋಲು ಯಾವುದು*

ಇ) *ಭೂಮಿಯ ವರ್ಗೀಕರಣದ ಆಧಾರದ ಮೇಲೆ ನಿಗಧಿ ನೋಂದಣಿ ಶುಲ್ಕ ಆಕರಣೆಮಾಡಿ ಈ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿಯ ಭ್ರಷ್ಟಾಚಾರವನ್ನು ತಡೆಯಲು ಸರ್ಕಾರ ಪ್ರಯತ್ನಿಸುವುದೆ?*

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಇಲ್ಲಾ